MVC No.248/2022 PW-1

**<u>ದಿನಾಂಕ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀಮತಿ ಪಿ ಬಿ ಸಿ ವಕೀಲರಿಂದಃ</u>**

ಅಪಘಾತವು ದಿಃ11.04.2022 ರಂದು ಕುನ್ನೂರು ಕಟ್ಟೆ ಬಳಿ ಆಗಿರುತ್ತದೆ. ನನಗೆ ಅಪಘಾತದ ಬಗ್ಗೆ ಶಾಲೆಯವರು ತಿಳಿಸಿರುತ್ತಾರೆ. ನಾನು ಅಪಘಾತವಾದ ಸ್ಥಳಕ್ಕೆ ಹೋಗಿಲ್ಲ. ನಾನು ನೇರವಾಗಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಗ ನನ್ನ ಗಂಡ ಪ್ರಜ್ಞಾಹೀನರಾಗಿದ್ದರು. ಅಪಘಾತವು ನನ್ನ ಗಂಡನ ತಪ್ಪಿ ನಿಂದ ಆಗಿಲ್ಲ. ನನ್ನ ಗಂಡನಿಗೆ ದ್ವಿಚಕ್ರ ವಾಹನದಿಂದ ಅಪಘಾತವಾಗಿರುತ್ತದೆ. ಈ ಸದರಿ ವಾಹನದ ಸಂಖ್ಯೆ ಹೇಳಲು ಆಗುವುದಿಲ್ಲ. ನನ್ನ ಗಂಡ ಚನ್ನಪಟ್ಟಣದ ಕಡೆಗೆ ಬರುತ್ತಿದ್ದರು. ಅಪಘಾತವಾದ ನಂತರ ಆ್ಯಂಬ್ಯುಲೆನ್ಸ್ ನಲ್ಲಿ ಹೋಗುವಾಗ ಸ್ಥಳವನ್ನು ನೋಡಿರುತ್ತೇನೆ. ಅಪಘಾತವು ಬೆಂಗಳೂರು ಮೈಸೂರು ಕಡೆ ಆಗಿದೆ. ಅಪಘಾತವು ತಿರುವಿನಲ್ಲಿ ಆಗಿದೆ. ಕುನ್ನೂರು ಕಟ್ಟೆಯಿಂದ ಬೆಂಗಳೂರು ಮೈಸೂರು ರಸ್ತೆಯಲ್ಲಿ ತಿರುವು ಪಡೆಯುತ್ತಿದ್ದಾಗ ಅಪಘಾತವಾಗಿರುತ್ತದೆ. ಬೆಂಗಳೂರಿನಿಂದ ಮೈಸೂರು ಕಡೆಗೆ ಪಲ್ಸರ್ ವಾಹನ ಹೋಗುತ್ತಿತ್ತು. ಅಪಘಾತವಾದ ಸ್ಥಳದಲ್ಲಿ ರಸ್ತೆ ತಡೆ ಇರಲಿಲ್ಲ ಎಂದರೆ ನಿಜ. ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸುಳ್ಳು. ನನ್ನ ಗಂಡ ಮುಂಜಾಗ್ರತೆ ಪಡೆಯದೆ ಅಜಾಗರುಕತೆಯಿಂದ ತಿರುವು ಪಡೆದಿದ್ದರಿಂದ ಅಪಘಾತವಾಗಿದೆ ಎಂದರೆ ಸುಳ್ಳು. ನನ್ನ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸುಳ್ಳು.

2. ನನ್ನ ಗಂಡನ ವಾಹನದ ಸಂಖ್ಯೆ ಹೇಳಲು ಆಗುವುದಿಲ್ಲ. ನನ್ನ ಗಂಡನ ಡಿಎಲ್ ಅನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣ ಆಸ್ಪತ್ರೆಯಿಂದ ಬೆಂಗಳೂರಿನ ಫೋರ್ಟೀಸ್ ಆಸ್ಪತ್ರೆಗೆ ನಾವೇ ಕರೆದುಕೊಂಡು ಹೋಗಿರುತ್ತೇವೆ. ನಕ್ಷೆಯಲ್ಲಿ ತೋರಿಸಿರುವಂತೆ ಅಪಘಾತವಾಗಿದೆ ಎಂದರೆ ನಿಜ. ಆಸ್ಪತ್ರೆಯಲ್ಲಿ ತಲೆಗೆ, ಬೆನ್ನು ಮೂಳೆಗೆ, ಕೈ ಕಾಲುಗಳಿಗೆ ಪೆಟ್ಟಾಗಿದೆ ಎಂದು ತಿಳಿಸಿರುತ್ತಾರೆ. ನಾವು ಆಸ್ಪತ್ರೆಯಲ್ಲಿ 8 ದಿನ ಇದ್ದೆವು. ಅದರಲ್ಲಿ 2 ಐಸಿಯು ನಲ್ಲಿ ಇದ್ದರು. ಈಗ ನನ್ನ ಗಂಡ ಅಷ್ಟು ಚೆನ್ನಾಗಿ ಮಾತನಾಡುವುದಿಲ್ಲ. ವೈದ್ಯಾಧಿಕಾರಿಯವರಿಂದ ಸಾಕ್ಷಿ ನುಡಿಸುತ್ತೇವೆ. ನನ್ನ ಗಂಡನಿಗೆ ತಲೆಗೆ ಮತ್ತು ಮೆದುಳಿಗೆ ಶಸ್ತ್ರ ಚಿಕಿತ್ಸೆಯಾಗಿದೆ. ನನ್ನ ಗಂಡನಿಗೆ ವಯಸ್ಸಾಗಿದ್ದರಿಂದ ಬೆನ್ನು

ಮೂಳೆಗೆ ಶಸ್ತ್ರ ಚಿಕಿತ್ಸೆ ಮಾಡಿಸಿಲ್ಲ ಆದರೆ ಬೆಲ್ಟ್ ಅನ್ನು ಧರಿಸಿರುತ್ತೇವೆ. ನನ್ನ ಗಂಡ ಈಗ ಚೆನ್ನಾಗಿ ಓಡಾಡುತ್ತಾರೆಂದರೆ ಸುಳ್ಳು. ನನ್ನ ಗಂಡ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯಿಂದ ವೈದ್ಯಕೀಯ ವೆಚ್ಚ ಬಂದಿಲ್ಲ. Yashashwini ಕಾರ್ಡ್ ಇದ್ದರೂ ಉಪಯೋಗ ಆಗಿಲ್ಲ. Yashashwini Card ನ್ಯಾಯಾಲಯಕ್ಕೆ ಕೊಡುತ್ತೇವೆ. ಈಗ ವೈದ್ಯಕೀಯ ವೆಚ್ಚ 15-16 ಲಕ್ಷವರೆಗೂ ಖರ್ಚಾಗಿರುತ್ತದೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**